ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

ಸಿ ಸಿ ನಂ. **935/2023**

ದಿಃ **10-06-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

| | | | |
|---|---|---|---|
| ಹೆಸರು | ಸುಬ್ರಮಣಿ | ಸಿ.ಡಬ್ಲ್ಯೂ | **03** |
| ವಯಸ್ಸು | 45 ವರ್ಷ | ಪಿ.ಡಬ್ಲ್ಯು: | **03** |
| ತಂದೆಯ / ಗಂಡನ ಹೆಸರು | ಸೊಂಬಣ್ಣ | | |
| ವೃತ್ತಿ | ಚಾಲಕ | | |
| ವಾಸಸ್ಥಳ | ಚಿಕ್ಕಬಳ್ಳಾಪುರ | | |

ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 02-10-2022 ರಂದು ನಾನು ಮತ್ತು ಅಬಕಾರಿ ಉಪ ಅಧೀಕ್ಷಕರು ಆದಂತಹ ಚಾಸಾ-4 ರವರು ಹಾಗೂ ಫ್ರಾಸಾ-2 ರವರು ನಮ್ಮ ಸರ್ಕಾರಿ ವಾಹನ ಸಂಖ್ಯೆ KA40G0545 ರಲ್ಲಿ ಗಾಂದಿ ಜಯಂತಿ ಪ್ರಯುಕ್ತ ಗಸ್ತು ನಿರ್ವಹಿಸುತ್ತಿದ್ದಾಗ ಗೌರಿಬಿದನೂರಿನ ನಾಗಪ್ಪ ಬ್ಲಾಕ್ ಬಳಿ ಪಂಚರನ್ನು ಬರಮಾಡಿಕೊಂಡು ಅಲಗಾನಹಳ್ಳಿ ಗ್ರಾಮದ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಅಕ್ರಮವಾಗಿ ಮದ್ಯ ಸಾಗಾಟದ ವಿಚಾರವಾಗಿ ಅನುಮಾನಾಸ್ಪದ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗ ಒಬ್ಬ ಆಸಾಮಿ ಒಂದು ದ್ವಿಚಕ್ರ ವಾಹನದಲ್ಲಿ ನೆರೆಯ ಆಂದ್ರ ಪ್ರದೇಶದ ವೆಂಕಟಾಪುರ ಕಡೆಯಿಂದ ಬರುತ್ತಿದ್ದರು. ಸದರಿ ವಾಹನದ ಚಾಲಕನ ಮೇಲೆ ನಮಗೆ ಅನುಮಾನ ಬಂದು ಸದರಿ ವಾಹನವನ್ನು ತಡೆದು ನಿಲ್ಲಿಸಿ ತಪಾಸಣೆ ಮಾಡಿದೆವು. ಸದರಿ ತಪಾಸಣಾ ಕಾಲಕ್ಕೆ ಚಾಲಕನ ಹೆಸರು ಕೇಳಲಾಗಿ ತನ್ನ ಹೆಸರು ನರಸಿಂಹಮೂರ್ತಿ ಬಿನ್ ಗಂಗಪ್ಪ ಎಂದು ಮತ್ತು ತಾನು ಹಿಡಗೂರು ಗ್ರಾಮದವರು ಎಂದು ತಿಳಿಸಿದನು.

ಸಮಯದ ಅಭಾವದ ಕಾರಣ ಶೋಧನಾ ಸಮುಚ್ಚಿತ ಆಧಾರವನ್ನು ಸ್ಥಳದಲ್ಲೇ ತಯಾರು ಮಾಡಿ ವಾಹನದ ತಪಾಸಣೆ ಕೈಗೊಂಡೆವು. ಸದರಿ ವಾಹನದ ಪೆಟ್ರೋಲ್ ಟ್ಯಾಂಕ್ ನ ಮೇಲೆ 5 ಲೀ ಸಾಮರ್ಥ್ಯದ ಒಂದು ಪ್ಲಾಸ್ಟಿಕ್ ಕ್ಯಾನ್ ಇತ್ತು. ಸದರಿ ಕ್ಯಾನ್ ಅನ್ನು ಪಂಚರ ಸಮಕ್ಷಮ ಮುಚ್ಚಳ ತೆರೆದು ನೋಡಲಾಗಿ ಅದರಲ್ಲಿ ಸುಮಾರು 4 ಲೀ. ಅಷ್ಟು ಸೇಂದಿ ಇತ್ತು. ನಂತರ ಸದರಿ ಮಾಲನ್ನು ಬಿಳಿ ಬಣ್ಣದ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಮುದ್ರೆಯನ್ನು ಹಾಕಲಾಯಿತು. ಸದರಿ ವಾಹನವನ್ನು ಪರಿಶೀಲಿಸಲಾಗಿ ಅದು ಕಪ್ಪು ಮತ್ತು

ನೀಲಿ ಬಣ್ಣ ಮಿಶ್ರಿತ ಹೀರೋ ಹೊಂಡಾ ಸ್ಪ್ಲೆಂಡರ್ ಪ್ಲಸ್ ದ್ವಿಚಕ್ರ ವಾಹನವಾಗಿದ್ದು ಅದರ ನೋಂದಣಿ ಸಂಖ್ಯೆ KA50E3563 ಆಗಿತ್ತು. ಸದರಿ ಚಾಲಕನ ಕೃತ್ಯವು ಕಾನೂನು ಬಾಹಿರ ಎಂದು ಆತನಿಗೆ ತಿಳಿಸಿ ನಂತರ ಮುದ್ದೆ ಮಾಲು ಮತ್ತು ವಾಹನವನ್ನು ನಿಪಿ-3 ರಂತೆ ಪಂಚನಾಮೆ ಜರುಗಿಸಿ ಅಮಾನತುಪಡಿಸಿಕೊಂಡೆವು. ನಿಪಿ-3 ಕ್ಕೆ ಚಾಸಾ-1 ರವರು ಸಹಿ ಮಾಡಿರುತ್ತಾರೆ. ಸಾಕ್ಷಿಯು ನಿಪಿ-3 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಸಿ ಎಂದು ಗುರುತಿಸಲಾಯಿತು. ನಿಪಿ-3 ಅನ್ನು ಮದ್ಯಾಹ್ನ 3 ರಿಂದ 4.15 ರವರೆಗೆ ಜರುಗಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಪ್ಲಾಸ್ಟಿಕ್ ಕ್ಯಾನ್ ಅನ್ನು ನೋಡಿ ಸದರಿ ಕ್ಯಾನ್ ತಾನು ಮತ್ತು ತನ್ನ ಮೇಲಾಧಿಕಾರಿಗಳು ಆಪಾದಿತನಿಂದ ವಶಪಡಿಸಿಕೊಂಡಂತಹ ಕ್ಯಾನ್ ಎಂದು ಗುರುತಿಸಿದ್ದು, ಸದರಿ ಕ್ಯಾನ್ ಅನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆಪಾದಿತನನ್ನು ನೋಡಿ ಗುರುತಿಸಿದರು. ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ನಂತರ ಮಾಲು ಮತ್ತು ಆಪಾದಿತನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ನಾನು ನನ್ನ ಮೇಲಾಧಿಕಾರಿಗಳ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**.)**

ದಿನಾಂಕ 23-11-2022 ರಂದು ಅಬಕಾರಿ ಉಪ ಅಧೀಕ್ಷಕರು ಚಿಕ್ಕಬಳ್ಳಾಪುರ ರವರ ಮುಂದೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿ.

ಪಾಟೀ ಸವಾಲುಃ ಆಪಾದಿತನ ಪರ ವಕೀಲರಾದ ಶ್ರೀ ವಿ**.**ವಿ**.**ಕೆ ರವರಿಂದಃ

ಪ್ಲಾಸ್ಟಿಕ್ ಕ್ಯಾನ್ ನಲ್ಲಿ ಸೇಂದಿಯನ್ನು ಶೇಖರಿಸಿದರೆ ಅದು ಉಬ್ಬಿಕೊಳ್ಳುತ್ತದೆ ಎಂದರೆ ಸರಿ. ಮು.ಮಾ-1 ಉಬ್ಬಿಕೊಂಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕ್ಯಾನ್ ಪೂರ್ತಿ ಸೇಂದಿ ತುಂಬಿದ್ದರೆ ಮಾತ್ರ ಉಬ್ಬಿಕೊಳ್ಳುತ್ತದೆ ಎಂದು ನುಡಿಯುತ್ತಾರೆ. ಸೇಂದಿ ಪ್ರಮಾಣ ಎಷ್ಟೇ ಇದ್ದರೂ ಪ್ಲಾಸ್ಟಿಕ್ ಕ್ಯಾನ್ ನಲ್ಲಿ ಉಬ್ಬಿಕೊಳ್ಳುತ್ತದೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿರುವ ಅಂಶಗಳು ಗೊತ್ತಿದೆ. ಘಟನಾ ಸ್ಥಳದ ಚೆಕ್ಕುಬಂದಿ ಗೊತ್ತಿಲ್ಲ. ಅಧಿಕಾರಿಗಳ ಮತ್ತು ಸಿಬ್ಬಂದಿಯ ಹೆಸರುಗಳನ್ನು ಬರೆದಿರುವ ಚೀಟಿಯನ್ನು ಮುದ್ದೆ

ಮಾಲಿಗೆ ಅಂಟಿಸುತ್ತಾರೆ ಎಂದರೆ ಸರಿ. ಮು.ಮಾ-1 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ನಾನು ಸದರಿ ದಿನ ಸ್ಥಳದಲ್ಲಿ ಇಲ್ಲದ ಕಾರಣ ನನ್ನ ಸಹಿ ಮು.ಮಾ-1 ರಲ್ಲಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತಪ್ಪಾಗಿ ತನ್ನ ಸಹಿ ಬಿಟ್ಟಿದ್ದಾರೆ ಎಂದು ನುಡಿಯುತ್ತಾರೆ. ಆಪಾದಿತನಿಗೂ ಮತ್ತು ದ್ವಿಚಕ್ರ ವಾಹನಕ್ಕು ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರಥಮ ಬಾರಿಗೆ ಆಪಾದಿತನನ್ನು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ಅನ್ನು ನನ್ನ ಮೇಲಾಧಿಕಾರಿಗಳು ಬರೆದಿರುತ್ತಾರೆ. ಆಪಾದಿತನನ್ನು ಮದ್ಯಾಹ್ನ 2.10 ಸಮಯಕ್ಕೆ ತಪಾಸಣೆಗೆ ಒಳಪಡಿಸಿದೆವು. ಸುಳ್ಳು ಪ್ರಕರಣವನ್ನು ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮಾ-1 ರಲ್ಲಿ ಸೇಂದಿ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು